ದಿಃ 8.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಟಿ.ಎಸ್.ಆರ್. ವಕೀಲರಿಂದ ,</u>**

1. ಈ ದಾವೆಯ ಸಂಗತಿಗಳು ನನಗೆ ತಿಳಿದಿರುತ್ತದೆ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದ ನೋಟೀಸು ಬಂದಿರುವುದಿಲ್ಲ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ವಾದಿ ನನ್ನನ್ನು ಕೇಳಿಕೊಂಡಿರುತ್ತಾರೆ. ವಾದಿಯ ಗಂಡ ನನ್ನ ಪರಿಚಯಸ್ತರು. ನನ್ನ ಹಾಗೂ ವಾದಿ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ನಾನು ವಾದಿಯ ಗಂಡನೊಂದಿಗೆ ವಿಶ್ವಾಸದಿಂದ ಇರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳನ್ನು ವಾದಿ ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳು ನನಗೆ ತಿಳಿದಿರುತ್ತದೆ.

2. ವಾದಿ ಹಾಗೂ ಪ್ರತಿವಾದಿಯರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ತಿಳಿದಿರುತ್ತದೆ. ಅವರ ನಡುವೆ 2022 ನೇ ಸಾಲಿನಲ್ಲಿ ವ್ಯವಹಾರ ಆಗಿದ್ದು ದಿನಾಂಕ ನನಗೆ ನೆನಪಿಲ್ಲ. ಅವರ ನಡುವೆ ಹಣಕಾಸಿನ ವಿಷಯವಾಗಿ ವ್ಯವಹಾರ ಆಗಿರುತ್ತದೆ ಎಂದರೆ ಸಾಕ್ಷಿ ವ್ಯಾಪಾರಕ್ಕಾಗಿ ವ್ಯವಹಾರ ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಸ್ವತ್ತನ್ನು ರೂ. 8,00,000/- ಗಳಿಗೆ ಮಾರಾಟ ಮಾಡಲು ಒಪ್ಪಿ ವಾದಿಯಿಂದ ರೂ. 10,000/- ಗಳನ್ನು ಮುಂಗಡವಾಗಿ ಪಡೆದಿರುತ್ತಾರೆ. ಸದರಿ ಮಾತುಕತೆ ವಾದಿಯ ಮನೆಯಲ್ಲಿ ಜರುಗಿರುತ್ತದೆ. ದಾವಾ ಸ್ವತ್ತು 1 ನೇ ವಾದಿಯ ಅತ್ತೆ ಶಾಂತಮ್ಮ ರವರಿಗೆ ದರಕಾಸ್ತಿನಲ್ಲಿ ಮಂಜೂರು ಆಗಿತ್ತು. ಮಾತುಕತೆ ಸಮಯದಲ್ಲಿ ದಾವಾ ಸ್ವತ್ತು ಸದರಿ ಶಾಂತಮ್ಮ ರವರ ಹೆಸರಿಗೆ ಇತ್ತು. ಸದರಿ ಸ್ವತ್ತು ಸರ್ಕಾರದಿಂದ ಆಕೆಯ ಹೆಸರಿಗೆ ಮಂಜೂರು ಆಗಿತ್ತು. ದಾವಾ ಸ್ವತ್ತು ಸದರಿ ಶಾಂತಮ್ಮನ ಗಂಡ ಸಿದ್ದಪ್ಪ ರವರಿಗೆ ಮಂಜೂರು ಆಗಿತ್ತು ಎಂದರೆ ಸರಿಯಲ್ಲ. ಸದರಿ

ಸಿದ್ದಪ್ಪ ಮೃತ ಪಟ್ಟ ನಂತರ ಆತನ ಸ್ವತ್ತಿನಲ್ಲಿ ಆತನ ಹೆಂಡತಿ ಮಕ್ಕಳಿಗೆ ಪಾಲು ಇರುತ್ತದೆ ಎಂದರೆ ಸರಿ.

3. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ಅದರ ಸರ್ವೆ ನಂಬರ್ 26 ಆಗಿರುತ್ತದೆ. ಅದರ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಮಾತುಕತೆ ಸಮಯದಲ್ಲಿ ಪ್ರತಿವಾದಿಯರು ದಾವಾ ಸ್ವತ್ತಿನ ಪಹಣಿಯನ್ನು ಮಾತ್ರ ತೋರಿಸಿರುತ್ತಾರೆ. ನಾನು ಹೇಳಿದಂತೆ ವಾದಿ ಹಾಗೂ ಪ್ರತಿವಾದಿಯರ ನಡುವೆ ದಾವಾ ಸ್ವತ್ತಿನ ಮಾರಾಟದ ಸಂಬಂಧ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. ಸ್ವತ್ತಿನ ಮಾರಾಟದ ಸಮಯ ಅದರ ಮಾರುಕಟ್ಟೆ ಬೆಲೆಯನ್ನು ಪರಿಶೀಲಿಸುತ್ತಾರೆ ಎಂದರೆ ಸರಿ. ಮಾತುಕತೆ ಸಮಯದಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಇತ್ತು ನನಗೆ ತಿಳಿದಿಲ್ಲ, ಆದರೆ ಮಾತುಕತೆ ಸಮಯ ಪ್ರತಿವಾದಿಯರು ಮೊದಲಿಗೆ ರೂ. 10,00,000/- ಎಂದು ಬೆಲೆಯನ್ನು ನಿಗಧಿ ಮಾಡಿದ್ದು, ಮಾತುಕತೆ ನಂತರ ರೂ. 8,00,000/- ಗಳಿಗೆ ಬೆಲೆಯನ್ನು ಅಂತಿಮಗೊಳಿಸಿರುತ್ತೇವೆ. ಪ್ರತಿವಾದಿಯರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ.

4. ನಿಪಿ - 1 ಕರಾರಿನ ಸಮಯ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ರೂ. 12,00,000/- ಇತ್ತು ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ - 1 ರ ಸಂಗತಿಗಳು ನನಗೆ ತಿಳಿದಿರುತ್ತದೆ. ನಿಪಿ - 1 ಕ್ಕೆ ಮೃತ ಶಾಂತಮ್ಮ, ಮೃತ ಗಿರಿಜಮ್ಮ ಹಾಗೂ ಪ್ರತಿವಾದಿಯರು ಸಹಿ ಮಾಡಿರುತ್ತಾರೆ. ಪ್ರತಿವಾದಿಯರು ವಾದಿಯಿಂದ ಸಾಲ ಪಡೆದು ಅದರ ಭದ್ರತೆಗಾಗಿ ನಿಪಿ - 1 ಕರಾರನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ಸದರಿ ಸಿದ್ದಪ್ಪ ಮೃತ ಪಟ್ಟ ನಂತರ ಪ್ರತಿವಾದಿಯರ ಕುಟುಂಬದ ವ್ಯವಹಾರಗಳನ್ನು ಮೃತ ಶಾಂತಮ್ಮ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಮೃತ ಶಾಂತಮ್ಮನ ಮೊಮ್ಮಗ ಶಿವರಾಜು ನನಗೆ ತಿಳಿದಿರುತ್ತಾರೆ. ಸದರಿ ಶಿವರಾಜು ರವರ ಮೂಲಕ ಸದರಿ ಶಾಂತಮ್ಮ ನನ್ನ ಬಳಿ ರೂ. 4,00,000/- ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ಆಗ ನಾನು ಮೃತ ಶಾಂತಮ್ಮನವರಿಗೆ ವಾದಿಯ ಪರಿಚಯ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಶಿವಮೊಗ್ಗದ ಸುಧಾ ಅಲಿಯಾಸ್ ಸುಮ ಕೋಂ ಕುಬೇರ ಎಂಬುವರು ನನಗೆ ತಿಳಿದಿಲ್ಲ. ವಾದಿ ಸದರಿ ಸುಧಾರವರ ಮೂಲಕ ಮೃತ ಶಾಂತಮ್ಮನವರಿಗೆ ಸಾಲ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸುಧಾರವರು ಸಾಲ ನೀಡುವ ಸಲುವಾಗಿ ವಾದಿ ಹೆಸರಿಗೆ ಕರಾರು ಬರೆದುಕೊಡುವಂತೆ ನಿಬಂಧನೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಸದರಿ ಸುಧಾ ಯಾರು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಮೃತ ಶಾಂತಮ್ಮ ರವರಿಗೆ ಹಣದ ಅವಶ್ಯಕತೆ ಇದ್ದ ಕಾರಣ ಪ್ರತಿವಾದಿಯರು ಸದರಿ ನಿಬಂಧನೆಗೆ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಪಿ - 1 ಅನ್ನು ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದು ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರೂ. 4,00,000/- ಕ್ಕೆ ಮಾಸಿಕ ಶೇಕಡ 2.5 ರಷ್ಟು ಬಡ್ಡಿ ನೀಡುವಂತೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ.

6. ಸದರಿ ಶಾಂತಮ್ಮ ರವರ ಮರಣದ ನಂತರ 1 ನೇ ಪ್ರತಿವಾದಿ ಸದರಿ ಸುಧಾರವರಿಂದ ಪಡೆದಿದ್ದ ಸಾಲದ ಹಣವನ್ನು ವಾದಿಯ ಸಮಕ್ಷಮ ತೀರುವಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದರೆ ಸದರಿ ಸುಧಾರವರು ಕರಾರನ್ನು ರದ್ದು ಪಡಿಸುವುದಾಗಿ ಹೇಳಿ ಈವರೆಗೆ ರದ್ದು ಪಡಿಸಿಲ್ಲ ಎಂದರೆ ನನಗೆ ತಿಳಿದಿಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತು ಪಡಿಸಿ ಪ್ರತಿವಾದಿಯರಿಗೆ ಬೇರೆ ಸ್ವತ್ತು ಇರುವುದಿಲ್ಲ

ಎಂದರೆ ನನಗೆ ತಿಳಿದಿಲ್ಲ. ಪ್ರತಿವಾದಿಯರು ಈಗಲೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ಜೀವನೋಪಾಯಕ್ಕಾಗಿ ದಾವಾ ಸ್ವತ್ತಿನ ಮೇಲೆ ಸಂಪೂರ್ಣ ಅವಲಂಭಿತರಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ಸಾಲದ ಭದ್ರತೆಗಾಗಿ ನಿಪಿ - 1 ಕರಾರನ್ನು ಬರೆದುಕೊಟ್ಟಿದ್ದರು ಅಕ್ರಮ ಲಾಭ ಪಡೆಯುವ ಸಲುವಾಗಿ ವಾದಿ ಸುಳ್ಳು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**